**O.S.No. 8114/2005**

P.W.1

**ದಿನಾಂಕ 02.11.2018**

P.W.1 ರವರನ್ನು ಈ ದಿನ ಕರೆಸಲಾಗಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ-2 ರ ಪರ ಶ್ರೀ ಕೆ.ಎಸ್.ಆರ್. ವಕೀಲರಿಂದಃ**

ಮುನಿಯಪ್ಪ ಮಾತ್ರ ಕೆಲಸಕ್ಕೆ ಹೋಗುತ್ತಾರೆ. ಉಳಿದ 3 ಜನ ವಾದಿಗಳು ರೈತರಿದ್ದೇವೆ. ಮುನಿಯಪ್ಪರವರು ಖಾಸಗೀ ನೌಕರಿಗೆ ಎಂ. ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದಾರೆ. ಮನಿಯಪ್ಪರವರು ಯಾವುದೇ ಖಾಸಗೀ ಕೆಲಸಕ್ಕೆ ಹೋಗುತ್ತಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು 4 ಜನ ಅಣ್ಣ ತಮ್ಮಂದಿರು ಮುನಿಯಪ್ಪ ನಾರಾಯಣಪ್ಪ ನಾನು ಮತ್ತು ಶ್ರೀನಿವಾಸ್‌ರವರು ಒಟ್ಟಿಗೆ ಇದ್ದೇವೆ ಎಂದರೆ ಸರಿಯಲ್ಲ, 1994 ರಲ್ಲಿ ಬೇರೆ ಆಗಿದ್ದೆವು. ನಮ್ಮ ತಂದೆಯವರ ಹೆಸರಿನಿಂದ ಸರ್ವೆ ನಂ.21/4 ರಲ್ಲಿ 21 ಗುಂಟೆ ಈಜಿಪುರದಲ್ಲಿ, ಸರ್ವೆ ನಂ.7/2 13 ಗುಂಟೆ ಶ್ರೀನಿವಾಗಿಲು. ಸರ್ವೆ ನಂ.3/2 0-10 1/2 ಶ್ರೀನಿವಾಗಿಲು. ಸರ್ವೆ ನಂ.7/4 ರಲ್ಲಿ 0.4 ಗುಂಟೆ ಶ್ರೀನಿವಾಗಿಲು. ನಮ್ಮ ತಂದೆಯವರ ತಂದೆ ಅಂದರೆ ತಾತನ ಹೆಸರು ಮುನಿಯಪ್ಪ ಅವರ ಮಗ ಬೈರಪ್ಪ. ಮೇಲೆ ಹೇಳಿದ ಆಸ್ತಿಗಳು ನಮ್ಮ ಜಂಟಿ ಕುಟುಂಬದ ಆಸ್ತಿಯಾಗಿರುತ್ತದೆ. ಈ ಕೇಸ್‌ನಲ್ಲಿ ನಾನು ಈ ಮೇಲೆ ಹೇಳಿದ ಸರ್ವೆ ನಂಬರ್‌ಗಳಲ್ಲಿ ವಿಭಾಗ ಕೇಳಲಿಲ್ಲ ಎಂದರೆ ಸರಿಯಲ್ಲ, ಕೇಳಿದ್ದೇನೆ. ನನ್ನ ಉಳಿದ 3 ಜನ ಅಣ್ಣ ತಮ್ಮಂದಿರು ನನಗೆ ಈ ಪ್ರಕರಣ ನಡೆಸಲು ಅಧಿಕಾರ ಪತ್ರ ಕೊಟ್ಟಿರುತ್ತಾರೆ. ಅದನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಹಾಜರುಪಡಿಸಿದ್ದೇನೆ. ನಾನು 10 ನೇ ತರಗತಿಯ ವರೆಗೆ ಓದಿರುತ್ತೇನೆ. 1984 ರಿಂದ 2005 ರ ವರೆಗೆ ನಾವು ಅಣ್ಣ ತಮ್ಮಂದಿರು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ.

ಹೊರಮಾವು ಗ್ರಾಮದಲ್ಲಿ 3 ಎಕ್ರೆ 6 ಗುಂಟೆ ಇರುತ್ತದೆ. ಅದರಲ್ಲಿ 3 ಗುಂಟೆ ಕರಾರು ಇರುತ್ತದೆ ಅದರಲ್ಲಿ ನಮ್ಮ ತಂದೆ ಖರೀದಿ ಮಾಡಿರುತ್ತಾರೆ. ನಮ್ಮ ತಂದೆಯವರು ಖರಿದ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿದಾರರು ಆ ಆಸ್ತಿಯು ನಮ್ಮ ತಂದೆಯವರ ಹೆಸರಿನಲ್ಲಿ ಇರುವುದಿಲ್ಲ, ನಮ್ಮ ದೊಡ್ಡ ಅಣ್ಣ ತಾಯಪ್ಪ-ಪ್ರತಿವಾದಿ-1 ರವರ ಹೆಸರಿನಲ್ಲಿದೆ. ನಮ್ಮ ಅಣ್ಣ 1975 ರಲ್ಲಿ ಈ ದಾವಾಸ್ತಿಯನ್ನು ಖರೀದಿ ಮಾಡಿರುತ್ತಾರೆ. ಈ ದಾವಾಸ್ತಿಯು ತಾಯಪ್ಪನವರು ಸ್ವಯಾರ್ಜಿತ ಸ್ವತ್ತು ಅಂದರೆ ಸರಿಯಲ್ಲ, ಒಂದು ಸ್ವತ್ತನ್ನು ಮಾರಟ ಮಾಡಿದ್ದೇನೆ ಅದು ಸರ್ವೆ ನಂ.3/2 ಆಗಿರುತ್ತದೆ. 5 ಜನ ಅಣ್ಣ ತಮ್ಮಂದಿರು ಸೇರಿ ಮಾರಾಟ ಮಾಡಿದ್ದೇವೆ. 1984ರಲ್ಲಿ ಮಿಕ್ಕಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ.

**(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿರುತ್ತಾರೆ. ಆದ್ದರಿಂದ ಮುಂದಿನ ವಿಚಾರಣೆಯನ್ನು ಮುಂದೂಡಿದೆ.)**

**(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ.

**( ಶಿವನಗೌಡ )**
**34ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**